**<u>ಸಾಕ್ಷಿಗೆ ದಿನಾಂಕ 20-01-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಹೆಚ್.ಎಂ.ಪಿ.ವಕೀಲರಿಂದ</u>**

ನನ್ನ ಗಂಡ ಮನೆ ಅಳಿಯತನಕ್ಕೆ ಬಂದು, ನಮ್ಮ ಮನೆಯಲ್ಲಿಯೇ ವಾಸವಾಗಿರುತ್ತಾನೆ. ನನ್ನ ಸ್ವಂತ ಊರು ಕಮರವಾಡಿ ಗ್ರಾಮ ಇರುತ್ತದೆ. ನನ್ನ ಮನೆಯ ಅಡ್ಡ ಹೆಸರು ಮಠಪತಿ ಮತ್ತು ಹಿರೇಮಠ ಎಂದು ಇರುತ್ತದೆ.

ಕಮರವಾಡಿಯಲ್ಲಿ ಬನ್ನಯ್ಯಾ ಎಂಬ ಹೆಸರಿನವರು ನನ್ನ ತಂದೆ ಮಾತ್ರ ಇರುತ್ತಾರೆ. ಕಮರವಾಡಿ ಗ್ರಾಮದಲ್ಲಿ ಎಂಬುವವರು ಬೇರೆ ಯಾರು ವ್ಯಕ್ತಿ ಇರುವುದಿಲ್ಲ ಎಂದರೆ ಸರಿ.

ವಾದಿಯ ಗಂಡನ ಹೆಸರು ನನಗೆ ಗೊತ್ತಿರುವುದಿಲ್ಲ. ವಾದಿಯ ಗಂಡನ ಹೆಸರು ಶಂಕರಯ್ಯಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶಂಕರಯ್ಯಾ ಇತನ ತಂದೆಯ ಹೆಸರು ಪೌಡಯ್ಯಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪೌಡಯ್ಯಾ ಇತನ ತಂದೆಯ ಹೆಸರು ನಿಂಗಯ್ಯಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ಅಜ್ಜನ ಹೆಸರು ಗುರುಲಿಂಗಯ್ಯಾ ಸ್ವಾಮಿ ಆಗಿರುತ್ತದೆ. ನನ್ನ ಅಜ್ಜ ಗುರುಲಿಂಗಯ್ಯಾ ಇತನ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಗುರುಲಿಂಗಯ್ಯಾ ಇತನ ಹೆಂಡತಿಯ ಹೆಸರು ನನಗೆ ಗೊತ್ತಿರುವುದಿಲ್ಲ.

ಗುರುಲಿಂಗಯ್ಯಾ ಇತನ ಹೆಸರಿನಲ್ಲಿ ಸೂಲಹಳ್ಳಿಯಲ್ಲಿ 3 ಎಕರೆ 30 ಗುಂಟೆ ಜಮೀನು ಇರುತ್ತದೆ. ಅದೇ ರೀತಿ ಕಮರವಾಡಿಯಲ್ಲಿಯು ಸಹ ಜಮೀನು ಇರುತ್ತದೆ ಅದರ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ.

ಕಮರವಾಡಿ ಗ್ರಾಮದಲ್ಲಿ ನಮ್ಮ ಮನೆಯ ಪಕ್ಕದಲ್ಲಿ ವಾದಿಯ ಮನೆ ಇರುತ್ತದೆ ಎಂದರೆ ಸರಿ.

ನನ್ನ ತಂದೆಯ ಸ್ವಂತ ಊರು ಲಾಡ್ಲಾಪೂರ ಗ್ರಾಮ ಇರುತ್ತದೆ ಎಂದರೆ ಸರಿಯಲ್ಲ.

ಗುರುಲಿಂಗಯ್ಯಾ ಇತನಿಗೆ ಒಬ್ಬ ಮಗನಿದ್ದು, ಆತನು ಮರಣಹೊಂದಿದ ನಂತರ ನನ್ನ ತಂದೆ ಬನ್ನಯ್ಯಾ ಸದರಿ ಗುರುಲಿಂಗಯ್ಯಾ ಇವರ ಮನೆಗೆ ಬಂದು ನೆಲೆಸಿರುತ್ತಾನೆ ಎಂದರೆ ಸರಿಯಲ್ಲ.

ಗುರುಲಿಂಗಯ್ಯಾ ಎಷ್ಟು ವರ್ಷಗಳ ಹಿಂದೆ ಮರಣಹೊಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಗುರುಲಿಂಗಯ್ಯಾ ಇತನ ಮಗ ಎಷ್ಟು ವರ್ಷಗಳ ಹಿಂದೆ ಮರಣಹೊಂದಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ.

ವಾದಿ ಮೊದಲು ಕಮರವಾಡಿ ಗ್ರಾಮದಲ್ಲಿ ವಾಸವಾಗಿದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ವಾದಿಯ ಪಾಲಿಗೆ ಬಂದಿದ್ದರಿಂದ ವಾದಿಯು ಸೂಲಹಳ್ಳಿ ಗ್ರಾಮದಲ್ಲಿ ಬಂದು ನೆಲೆಸಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯು ಈಗ ಸೂಲಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದೊಡ್ಡಯ್ಯಾ ಇತನಿಗೆ ಗುರುಲಿಂಗಯ್ಯಾ ಮತ್ತು ನಿಂಗಯ್ಯಾ ಎಂಬುವವರು ಇಬ್ಬರು ಸಹೋದರರು ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಗುರುಲಿಂಗಯ್ಯಾ ಮತ್ತು ನಿಂಗಯ್ಯಾ ಇವರ ಹೆಸರಿನಲ್ಲಿ ಕಮರವಾಡಿ ಗ್ರಾಮದಲ್ಲಿ ಸರ್ವೆ ನಂಃ 87 ಮತ್ತು ಸೂಲಹಳ್ಳಿ ಗ್ರಾಮದಲ್ಲಿ ದಾವಾ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯು ನಿಂಗಯ್ಯಾ ಇತನ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ನಿಂಗಯ್ಯಾ ಮತ್ತು ಗುರುಲಿಂಗಯ್ಯಾ ಇಬ್ಬರು ಮರಣಹೊಂದಿದ್ದರಿಂದ ಸದರಿ ದಾವಾ ಆಸ್ತಿಯು ಸದರಿಯವರ ಹೆಸರಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ದಾವಾ ಆಸ್ತಿಯನ್ನು ತಾನು ಗುರುಲಿಂಗಯ್ಯಾ ಇತನ ಮಗ ಇರುತ್ತೇನೆ ಎಂದು ಸುಳ್ಳು ಹೇಳಿ, ತನ್ನ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿಯ ತನ್ನ ಗಂಡನ

ಜೀವಿತಾವಧಿಯಲ್ಲಿ ಸದರಿ ವಿಷಯದ ಬಗ್ಗೆ ಪಂಚಾಯತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.



ವಾದಿಯು ನನ್ನ ತಂದೆಗೆ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಡುವಂತೆ ಸಾಕಷ್ಟು ಬಾರಿ ಕೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ನನ್ನ ತಂದೆ ವಾದಿಗೆ ಸದರಿ ದಾವಾ ಆಸ್ತಿಯನ್ನು ವರ್ಗಾವಣೆ ಮಾಡಿಕೊಡುತ್ತೇನೆ ಎಂದು ಹೇಳಿ, ನಂತರ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ದಾನಪತ್ರದ ಮೂಲಕ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗೆ ದಾವಾ ಆಸ್ತಿಯನ್ನು ನೀಡಬಾರದೆಂದು ನಾನು ನನ್ನ ತಂದೆಯ ಕಡೆಯಿಂದ ಒಂದು ಸುಳ್ಳು ದಾನಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪೂರ್ವಕ್ಕೆ ನಿಂಗಣ್ಣಾ ಈರಣ್ಣಾ ಇವರ ಜಮೀನು ಇದ್ದು, ಪಶ್ಚಿಮಕ್ಕೆ ಸಾಬಣ್ಣಾ ಇತನ ಜಮೀನು, ಉತ್ತರಕ್ಕೆ ಯಾರ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ದಕ್ಷಿಣಕ್ಕೆ ಶಾಂತಾಬಾಯಿ ಗೌರಮ್ಮ ಇವರ ಜಮೀನುಗಳು ಇರುತ್ತವೆ.

ದಾವಾ ಆಸ್ತಿಯ ಪೂರ್ವಕ್ಕೆ ಚಂದ್ರಯ್ಯಾ ಇತನ ಜಮೀನು ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಶಾಂತಮ್ಮ ಭೀಮಮ್ಮಾ ಇವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಈರಯ್ಯಾ ಬಸಯ್ಯಾ ಕಲಾಲ ಇತನ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಕ್ಷಿಣಕ್ಕೆ ಮಲ್ಲಯ್ಯಾ ಈರಯ್ಯಾ ಸ್ವಾಮಿ ಇವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯ ಸ್ವಾಧೀನವನ್ನು ವಾದಿಯು ಹೊಂದಿದ್ದು, ಸದರಿ ದಾವಾ ಆಸ್ತಿಯ ಸ್ವಾಧೀನವನ್ನು ಆಕೆಯ ಗಂಡ ಮತ್ತು ಪೂರ್ವಜರು ಸಹ ಹೊಂದಿದ್ದರು ಎಂದರೆ ಸರಿಯಲ್ಲ.

ಇಂದಿಗೂ ಸಹ ದಾವಾ ಆಸ್ತಿಯ ಸ್ವಾಧೀನವನ್ನು ವಾದಿಯೇ ಹೊಂದಿದ್ದು, ಸದರಿ ದಾವಾ ಆಸ್ತಿಯಲ್ಲಿ ವಾದಿಯೇ ಸಾಗುವಳಿ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಹತ್ತಿ ಬೆಳೆ ಬೆಳೆದಿದ್ದು, ಅದನ್ನು ವಾದಿಯೇ ಬೆಳೆದಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸದರಿ ಹತ್ತಿ ಬೆಳೆಯನ್ನು ನಾವೇ ಬೆಳೆದಿರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ವಾದಿಗೆ ಪಾಲಿನಲ್ಲಿ ಬಂದಿದ್ದು, ಸದರಿ ದಾವಾ ಆಸ್ತಿಯ ಸ್ವಾಧೀನವನ್ನು ವಾದಿಯೇ ಹೊಂದಿರುತ್ತಾಳೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ದಾವಾ ಆಸ್ತಿ ಇದುದ್ದರಿಂದ ಅದರ ಆಧಾರದ ಮೇರೆಗೆ ನಾನು ಒಂದು ಸುಳ್ಳು ದಾನಪತ್ರವನ್ನು ಸೃಷ್ಠಿಸಿಕೊಂಡು, ನಾನೇ ದಾವಾ ಆಸ್ತಿಯ ಸ್ವಾಧೀನ ಹೊಂದಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.